Regd No Bo 165 11-10-1969

SATYAVADI Daily MYSORE 4 ‡ 53 rd Year of Publication

ಸತ್ಯವಾದಿ

ಸುವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

Golden Jubilee Celebrated Paper

ಸ್ಥಾಪಕರು: ಆರಮನೆ ವಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಗೋವಧೆ ನಿರ್ಣಯ ವಿರುದ್ಧ ಚಿಕ್ಕಮಗಳೂರಿನಲ್ಲಿ ಹರತಾಳ

ಪಾಕಿಸ್ತಾನಿ ಬಂಧನ

ಮಂಗಳೂರು— ದೇಶವಲ್ಲಿ ಹೆಚ್ಚು ಕಾಲ ನೆಲೆಸಿದ ಆಪಾದನೆಗಾಗಿ ಕಂಕನಾಡಿಯಲ್ಲಿ ಪಾಕಿಸ್ತಾನಿ ರಾಷ್ಟ್ರೀಯ ಕೆ ವಿ ಖಾದರ್ ದಸ್ತಗಿರಿ ಮಾಡಲ್ಪಟ್ಟನು.

●

ಸೌಂದರ್ಯ ರಾಣಿ

ಬೆಂಗಳೂರು— ವಿಶ್ವಸಂಸ್ಥೆ ವಿದ್ಯಾರ್ಥಿ ಸಂಘ ಏರ್ಪಡಿಸಿದ್ದ ಸೌಂದರ್ಯ ಸ್ಪರ್ಧೆಯಲ್ಲಿ ಮಹಾರಾಣಿ ಕಾಲೇಜಿನ ವಿಜಯ ಶಂಕರ್ ಸೌಂದರ್ಯ ರಾಣಿಯಾಗಿ ಆಯ್ಕೆಯಾದರು.

●

ಬೆಲೆ ಇಳಿತ

ಬೊಂಬಾಯಿ— ಕಡಲೆಕಾಯಿ ಎಣ್ಣೆ ಮತ್ತು ಕಡಲೇಕಾಯಿ ಬೆಲೆ ಬಹುಮಟ್ಟಿಗೆ ಇಳಿದಿದೆ – ಕೆಲವು ಉತ್ಪಾದಿತ ಭಾಗಗಳಿಂದ ಹೊರಳವಾಗಿ ಬಂದಿರುವದೇ ಕಾರಣ.

○

ಟಾರ್ಚ್‌ಲೈಟ್ ಮೆರವಣಿಗೆ

ಕಲ್ಕತ್ತಾ—ಪೋಲೀಸು ಆಜ್ಞೆ ಉಲ್ಲಂಘಿಸಿ ಸಂಯುಕ್ತ ವಿರುದ್ಧ 300 ವಿದ್ಯಾರ್ಥಿಗಳಿದ್ದು ನಡೆಸಲಾದ ಟಾರ್ಚ್‌ಲೈಟ್ ಮೆರವಣಿಗೆ ಸಂಬಂಧದಲ್ಲಿ 40 ಮಂದಿ ನೆಕ್ಸಲೈಟರು ಬಂಧಿಸಲ್ಪಟ್ಟರು.

★

ನೆಕ್ಸಲೈಟು ಖೈದಿಗಳ ಪರಾರಿ

ವಿಶಾಖಪಟ್ಟಣ— 11 ಮಂದಿ ನೆಕ್ಸಲೈಟ್ ಖೈದಿಗಳು ಕೇಂದ್ರ ಜೈಲಿನಿಂದ ಪರಾರಿಯಾದ್ದಾರೆ.

ಗೋಹತ್ಯೆ ತರಾವು ಪ್ರತಿಭಟನೆ

ಚಿಕ್ಕಮಗಳೂರು— ಗೋಹತ್ಯೆಕ್ಕೆ ಅನುಮತಿ ನೀಡಿದ ಪೌರಸಭೆ ತರಾವನ್ನು ಪ್ರತಿಭಟಿಸಿ ಗುರುವಾರ ನಗರದಲ್ಲಿ ಜನಸಂಘದ ಕರೆಯಂತೆ ಪೂರ್ಣ ಹರತಾಳ ಆಚರಿಸಲಾಯಿತು ; ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು – ಪೌರಸಭೆಯ ತರಾವನ್ನು ಜಿಲ್ಲಾಧಿಕಾರಿಗಳು ತಮಗಿರುವ ಅಧಿಕಾರದಿಂದ ತರಾವನ್ನು ರದ್ದು ಮಾಡಿದರು

○

ವೇಷ ಧರಿಸಕೂಡದು

ಮಂಗಳೂರು— ಇಲ್ಲಿ, ಉಡುಪಿ, ಪುತ್ತೂರಿನಲ್ಲಿ ದಸರಾ ಕಾಲದಲ್ಲಿ ಸಿದ್ದಿ, ಹುಲ್ಲು ಮಾರುವ,- ವಿಾನುಮಾರುವ, ವೇಷ ಧರಿಸುವುದು ಪ್ರತಿಬಂಧಿಸಲಾಗಿದೆ.

★

ಮುಖ್ಯ ಮಂತ್ರಿಗಳ ಸಭೆ ನಿರ್ಧಾರದಂತೆ

ಹೈದರಾಬಾದು— ನಡೆಯಲಿರುವ ಕಾಂಗ್ರೆಸ್ ಮುಖ್ಯಮಂತ್ರಿಗಳ ಸಭೆಯು ಮಾಡುವ ತೀರ್ಮಾನದಂತೆ ತಾವು ವರ್ತಿಸುವದಾಗಿ ಆಂಧ್ರ ಮುಖ್ಯ ಮಂತ್ರಿ ಬ್ರಹ್ಮಾನಂದ ರೆಡ್ಡಿಯವರು ಹೇಳಿದರು.

★

ತಿರಸ್ಕಾರ

ನವದೆಹಲಿ— ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯನ್ನು ಆಕ್ಟೋಬರು 15 ರಂದೂ, ಎ ಐ ಸಿ ಸಿ ಅಧಿವೇಶನವನ್ನು ನವೆಂಬರು 17 ಕ್ಕೆ ಮುಂಚೆಯೂ ನಡೆಸಲು ಪ್ರಧಾನಿ ಮತ್ತು ಇತರ ಐದು ನುಂದಿ ಕಾರ್ಯಕಾರಿ ಸಮಿತಿ ಸದಸ್ಯರ ಮನವಿಯನ್ನು ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರು ತಿರಸ್ಕರಿಸಿದರು.

ಶೋಚನೀಯ

ಮದ್ರಾಸು— ನವೆಂಬರು 1 ರಿಂದ ಆಂಧ್ರ ಪ್ರದೇಶದಲ್ಲಿ ಪಾನನಿರೋಧ ತೆಗೆದುಹಾಕಲು ಅಲ್ಲಿಯ ಸರ್ಕಾರದ ನಿರ್ಧಾರವು ಶೋಚನೀಯವೆಂದು ಕಾಮರಾಜರು ಹೇಳಿದರು.

★

ಇದೊಂದು ಸೋಜಿಗ

ಹೈದರಾಬಾದು— ಗುಂಟೂರು ಜಿಲ್ಲೆಯ ಎತಿಪೋಥಾ ಜಲಪಾತದ ಹತ್ತಿರ ಒಂದು ಪ್ರವಾಸ ಭವನವಿದೆ ; ಅಲ್ಲಿ ನೀರಿಲ್ಲ, ವಿದ್ಯುಚ್ಛಕ್ತಿ ಇಲ್ಲ, ಪೀಠೋಪಕರಣವಿಲ್ಲ, ಅಡಿಗೆ ಪಾತ್ರೆಗಳಿಲ್ಲ, ಸುತ್ತ ತೋಟವಿಲ್ಲ, ಟೆಲಿಫೋನಿಲ್ಲ ; 10 ವರ್ಷಗಳಿಂದಿರುವ ಈ ಕಟ್ಟಡ ಉಪಯೋಗಿಸಲ್ಪಡುತ್ತಿಲ್ಲ, ಯಾರೂ ನೆಲಸಿಲ್ಲ ; ಒಬ್ಬ ವಾಚ್‌ಮೆನ್ ಇದಾನೆ ; ಇದೂ ಒಂದು ಪ್ರವಾಸಿ ಭವನ !

★

ಬೆಂಗಳೂರು ವಿಶ್ವವಿದ್ಯಾನಿಲಯ

ಬೆಂಗಳೂರು— ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಶ್ರೀ ರಾಮಚಂದ್ರರು ಹೆಂಗಾಮಿ ಉಪಕುಲಪತಿಯಾಗಿ ನೇಮಿಸಲ್ಪಟ್ಟರು. ಪ್ರೊ!! ಗೋಕಾಕ್‌ರವರು ನಿವೃತ್ತರಾದರು.

○

ಚಿರತೆ ಸಾಕುವ ಮುಖ್ಯ ಮಂತ್ರಿ

ಗೋವಾದ ಮುಖ್ಯ ಮಂತ್ರಿ ಬಂಡೋಡಕರರು, ಬೇಟೆಗಾರನೊಬ್ಬನು ಕೊಂದ ಒಂದು ಚಿರತೆ ಮರಿಯನ್ನು ಸಾಕುತ್ತಿರುವರು : ಅವರಲ್ಲಿ ಒಂದು ಜಿಂಕೆಯೂ ಹಲವು ಬೆಕ್ಕುಗಳೂ, ಬೇಟೆನಾಯಿಗಳೂ, ಪಕ್ಷಿಗಳೂ ಇವೆ.

ಎಂಜಿನಿಯರರಿಗೆ ವಿದೇಶಗಳಲ್ಲಿ ಕೆಲಸವೆ

ನವದೆಹಲಿ— ಇಲ್ಲಿ ನವೆಂಬರು 3 ರಂದು ನಡೆಯುವ ಕಾಮನ್ವೆಲ್ತ್ ಇಂಜಿನೀರಿಂಗು ಸಮ್ಮೇಳನದಲ್ಲಿ, ವಿದೇಶಗಳಲ್ಲಿ ಭಾರತೀಯ ಇಂಜಿನಿಯರುಗಳಿಗೆ ಉದ್ಯೋಗ ದೊರಕಿಸುವ ವಿಷಯ ಪರ್ಯಾಲೋಚಿಸಲಾಗುವುದೆಂದು ಹೇಳಲಾಗಿದೆ.

★

ಮಾಜಿ ಮಂತ್ರಿ ಪರಾರಿ

ರೋಂ— ಗೃಹಬಂಧನದಲ್ಲಿಡಲಾಗಿದ್ದ ಮಾಜಿ ಗ್ರೀಕ್ ವಿದ್ಯಾಮಂತ್ರಿ ಜಾರ್ಜು ವಿಲೆನಾಸ್ ಪರಾರಿಯಾಗಿರುವರು.

★

ಸಹಾನುಭೂತಿ

ಪಂಜಿ— ಶಾಸನಸಭೆಯಲ್ಲಿ ಸಸ್ಪೆಂಡು ಮಾಡಲ್ಪಟ್ಟ ರೇಕ್ ಸಂತಾನಾ ಫರ್ನಾಂಡಿಸ್ ರವರ ಸಹಾನುಭೂತವಾಗಿ ವಿರೋಧ ಪಕ್ಷದ ಸದಸ್ಯರು ತಾವು ಸ್ವಸಸ್ಪೆಂಡು ಮಾಡಿಕೊಂಡು ಸಭಾಪರಿತ್ಯಾಗ ಮಾದಿದರು.

★

ಉಪವಾಸ ನಿಂತಿತು

ಮೈಸೂರು— ತಮ್ಮ ಕೇಳಿಕೆಯು ಒತ್ತಾಯಕ್ಕಾಗಿ ಉಪವಾಸಕ್ಕೆ ತೊಡಗಿದ್ದ ಆರಮನೆ ನೌಕರರು, ಅವರ ಕೇಳಿಕೆ ಪರ್ಯಾಲೋಚಿಸಲಾಗುವದೆಂದು ಅಧಿಕಾರಿಗಳು ತಿಳಿಸಿದ್ದರಿಂದ ಉಪವಾಸ ನಿಲ್ಲಿಸಿದರು.

ಬೆಂಗಳೂರು— ತಮಿಳುನಾಡುವಿನ ವಿರೋಧವಿದ್ದರೂ, ರಾಜ್ಯದ ಡಿ ಎಂ ಕೆ ಶಾಖೆಯು ಹೇಮಾವತಿ ಪ್ರಾಜೆಕ್ಟನ್ನು ಜಾರಿಗೆ ತರಬೇಕೆಂಬ ಮೈಸೂರು ಸರ್ಕಾರದ ನಿರ್ಧಾರಕ್ಕೆ ಬೆಂಬಲ ನೀಡಿದೆ.

"Bank Road Bahusar – A Fair Price Shop in Actual Practice"

ಗಾಂಧೀಜೀ ಅಮೃತವಾಣಿ

**

ತ್ಯಾಗವೇ ನಿಜವಾದ ಭೋಗ

ಹಕ್ಕುಗಳು ನಿಜವಾದ ಮೂಲ ಕರ್ತವ್ಯ.

ಹೋರಾಟದಲ್ಲಿ, ಪ್ರಯತ್ನದಲ್ಲಿ, ಕಷ್ಟವನ್ನು ಸೋಲಿಸುವಲ್ಲಿ ಆನಂದವು ಅಡಗಿದೆಯಲ್ಲದೆ, ಅಂತಿಮ ವಿಜಯದಲ್ಲಿ ಮಾತ್ರವಲ್ಲ.

ಅಹಿಂಸೆಯಿಂದ ಹುಟ್ಟಿಬಂದ ಬಲವು ಮನುಷ್ಯ ತನ್ನೆಲ್ಲ ಬುದ್ಧಿ ಕೌಶಲ್ಯದಿಂದ ಉತ್ಪಾದಿಸಿರುವ ಎಲ್ಲ ಅಸ್ತ್ರಗಳ ಒಟ್ಟು ಬಲಕ್ಕಿಂತಲೂ ಹೆಚ್ಚು ಶಕ್ತಿಶಾಲಿಯಾಗಿದೆ.

ನ್ಯಾಯಾಲಯದ ಕಟ್ಟಿಗಿಂತ ಹೆಚ್ಚಿನ ಉನ್ನತಕಟ್ಟೆಯೊಂದಿದೆ ; ಸತ್ಯ ಅಂತಃಸಾಕ್ಷಿಯೇ ಆ ಕಟ್ಟೆ : ಇದು ಉಳಿದೆಲ್ಲ ನ್ಯಾಯಾಲಯಗಳ ಕಟ್ಟೆಗಳನ್ನು ಹಿಂದೆ ಹಾಕುತ್ತದೆ

ನಮ್ಮ 'ಬೇಕು'ಗಳನ್ನು ಅರ್ಥಾತ್ ಆಶೆಗಳನ್ನು ಹೆಚ್ಚಿಸಿಕೊಳ್ಳದೆ ಬುದ್ಧಿಪೂರ್ವಕವಾಗಿ ಮತ್ತು ಸ್ವಸಂತೋಷದಿಂದ ಅವುಗಳನ್ನು ಕಡಮೆ ಮಾಡಿಕೊಳ್ಳುವುದರಲ್ಲಿಯೇ ನಿಜವಾದ ನಾಗರೀಕತೆ ಅಡಗಿದೆ.

ಒಂದೇ ಬಾವುಟದ ಅಡಿಯಲ್ಲಿ ಭಾರತದ ಎಲ್ಲ ಧರ್ಮಗಳ ಮತ್ತು ಜನಾಂಗಗಳ ಜನರನ್ನು ಕಲೆಹಾಕಿ, ಅವರಲ್ಲಿನ ಕೋಮುಭಾವನೆ ಅಥವಾ ಪ್ರಾಂತೀಯ ಭಾವನೆಗಳನ್ನು ಹೊರದಬ್ಬಿ, ಅವರಲ್ಲಿ ಸಂಘಟನೆ ಮತ್ತು ಐಕ್ಯಮತ್ಯದ ಚೈತನ್ಯವನ್ನು ಪ್ರಚೋದಿಸಬೇಕು.

ಪ್ರತಿಯೊಬ್ಬನಿಗೂ ತನ್ನ ತಾಯ್ನುಡಿಯಲ್ಲದೆ ಮತ್ತು ಅಂತರಪೀಠಿಕ್ಷಣ ದೊರೆಯಬೇಕು : ವಿದೇಶೀ ಭಾಷೆಯು ಏಚ್ಛಿಕ ಭಾಷೆಯಾಗಬೇಕು.

ಆತ್ಮಸಾಕ್ಷಿಯಾಗಿ ತಮ್ಮ ತಪ್ಪುಗಳನ್ನು ಒಪ್ಪಿಕೊಂಡರೆ ನಿನ್ನ ಶತ್ರುಗಳೂ ಇಂದು ಮಿತ್ರರಾಗಬಲ್ಲರು.

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ

ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ದೇಶದ ಹಿತಕಾಗಿ
ಕುಟುಂಬ ಯೋಜನೆ

SHAKTI
SUDHA

A Superb Tonic

ಪುಡ್‌ಲ್ಯಾಂಡ್ ತಾ. 10-10-69 ರಿಂದ
ಶಿ ನ ಅಮೋಘ ಪ್ರಾರಂಭ
— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮ್ಯಾನ್ ಕಲರ್ —
ಹಸೀನಾ ಮಾನ್ ಜಾಯೇಗಿ
ಶಶೀಕಪೂರ್ ಬಬೀತಾ ಜಾನಿವಾಕರ್
ಸಂಗೀತ : ಕಲ್ಯಾಣಜೀ ಆನಂದಜಿ
[ದಿನ 3 ಪ್ರದರ್ಶನಗಳು]

ಆಪೆರಾ 10-10-69 ರಿಂದ
.... ಅಮೋಘ ತಮಿಳು ಚಿತ್ರ ....
ಎಂಗವೀಟ್ಟು ಪಿಳ್ಳೈ
ಪಾತ್ರ— ಎಂ. ಜಿ. ಆರ್ ಬಿ. ಸರೋಜಾದೇವಿ ಎಸ್. ವಿ ರಂಗಾರಾವ್
ನಾಗೇಶ್ ತಂಗವೇಲು (ಹೊಸ ಕಾಪಿ)
ದಿನ 8 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿಗಿ ನಡೆಯಲಿ
ಗೋರಕ್ಷಣೆಗೆ ಬೆಂಬಲ ನೀಡಿ
Protect the Cow

Quality Printing — Neat Binding
Lakshminarasimha Press
Sivarampet, Mysore

Edited, Printed & Published by Dharmaprachara Nirata M. S. Krishna Rao (Proprietor) at the Satyavadi Press Chamarajapuram, Mysore 4